ಇ) ನಗರಸಭೆಗಳಿಗೆ ಮೋಟಾರು ವಾಹನ ತೆರಿಗೆಯಲ್ಲಿ ಹೆಚ್ಚಿನ ಪಾಲು ಕೊಡಲು ನಿರ್ಣಯಿಸಲಾಗಿದೆಯೇ ?

ಶ್ರೀ ಎ. ಲಕ್ಷ್ಮಿಸಾಗರ್.— ಮಾನ್ಯ ನಗರಾಭಿವೃದ್ಧಿ ಸಚಿವರು

ಅ) ಬಂದಿದೆ.

ಆ) ಮತ್ತು ಇ) ಆಯೋಗದ ಶಿಫಾರಸ್ಸುಗಳ ಪರಿಶೀಲನೆಯಲ್ಲಿರುತ್ತವೆ.

ಹರಿಹರ ಕಿರ್ಲೋಸ್ಕರ ಕಾರ್ಖಾನೆಯಲ್ಲಿ ಸಿಬ್ಬಂದಿ ವರ್ಗದವರನ್ನು ತೆಗೆದು ಹಾಕುತ್ತಿರುವ ಬಗ್ಗೆ.

೯೮೫. ಶ್ರೀ ಬಿ.ಜಿ. ಕೊಟ್ರಪ್ಪ.—ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಯಿಟ್ಟು ಉತ್ತರಿಸುವರೆ ?

ಅ) ಹರಿಹರ ಕಿರ್ಲೋಸ್ಕರ್ ಕಾರ್ಖಾನೆಯ ಆಡಳಿತ ವರ್ಗದಲ್ಲಿ ಕೆಲಸ ಮಾಡುತ್ತಿದ್ದವರನ್ನು ಒತ್ತಾಯಪೂರ್ವಕವಾಗಿ ಕೆಲಸದಿಂದ ತೆಗೆದುಹಾಕುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಡಿ. ಮಂಜುನಾಥ (ಕಾರ್ಮಿಕ ಸಚಿವರು).—

ಅ) ಇಲ್ಲ.

ಹೊಸದುರ್ಗ ಪಟ್ಟಣದ ಕುಡಿಯುವ ನೀರು ಸರಬರಾಜಿನ ಬಗ್ಗೆ.

೧೦೩೭. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಸದುರ್ಗ ಪಟ್ಟಣದ ಜನರಿಗೆ ನೀರಿನ ಸಮಸ್ಯೆಯು ಶಾಶ್ವತ ಪರಿಹಾರ ನೀಡಲು ಸರ್ಕಾರದವರು ವಿಶೇಷ ಯೋಜನೆಯನ್ನು ಜಾರಿಗೆ ತರಲು ಸಾಧ್ಯವೇ ?

ಆ) ಹಾಗಿದ್ದಲ್ಲಿ ಹೊಸದುರ್ಗ ಪುರಸಭೆಗೆ ವ್ಯವಸ್ಥಿತ ನೀರು ಸರಬರಾಜಿಗಾಗಿ ಹೆಚ್ಚಿನ ಆರ್ಥಿಕ ನೆರವು ನೀಡಲು ಸಾಧ್ಯವೇ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—

ಅ) ಈಗಾಗಲೇ ಶಾಶ್ವತ ನೀರು ಸರಬರಾಜು ಯೋಜನೆಯೊಂದು ಕಾರ್ಯಗತವಾಗಿದೆ.

ಆ) ಉದ್ಭವಿಸುವುದಿಲ್ಲ.

ಬೆಂಗಳೂರು–ಮೈಸೂರು ರಸ್ತೆಯ ಪಕ್ಕದಲ್ಲಿ ಬೆಂಗಳೂರು ನಗರದಿಂದ ಹರಿಯುವ ಕೊಳಚೆ ನೀರಿನ ವಾಸನೆ ಬಗ್ಗೆ

೧೫೬೦. ಶ್ರೀ ಎಂ. ಶಿವಣ್ಣ.—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು–ಮೈಸೂರು ರಸ್ತೆಯ ಪಕ್ಕದಲ್ಲಿ ಬೆಂಗಳೂರು ನಗರದಿಂದ ಹರಿಯುವ ಕೊಳಚೆ ನೀರಿನ ವಾಸನೆ ತಡೆಯಲಾಗದಷ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಕೊಳಚೆ ನೀರನ್ನು ಪೈಪುಗಳ ಮೂಲಕ ಹೋಗುವಂತೆ ವ್ಯವಸ್ಥೆ ಮಾಡುವುದು ಸಾಧುವಲ್ಲವೇ ?

ಇ) ಸರ್ಕಾರದವರು ಈ ಬಗ್ಗೆ ಕೂಡಲೇ ಕ್ರಮ ಕೈಗೊಂಡು ಮೇಲ್ಕಂಡ ವ್ಯವಸ್ಥೆ ಮಾಡಿ ಜನತೆಗಾಗುತ್ತಿರುವ ತೊಂದರೆಗಳನ್ನು ನಿವಾರಿಸುವರೇ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಬಂದಿದೆ.

ಆ) ಹೌದು.

ಇ) ಬೆಂಗಳೂರು ಮೈಸೂರು ರಸ್ತೆಯ ಸಮೀಪದಲ್ಲಿರುವ ವೃಷಭಾವತಿ ಕಣಿವೆಯಲ್ಲಿ ಈಗಿರುವ ಕೊಳಚೆ ನೀರಿನ ಪ್ರಾಥಮಿಕ ಶುದ್ಧೀಕರಣ ಘಟಕವನ್ನು ವಿಸ್ತರಿಸಿ ಇನ್ನೂ ಹೆಚ್ಚಿನ ಮಟ್ಟದ ಅಂದರೆ ದ್ವಾಧ್ಯಮಿಕ ಶುದ್ಧೀಕರಣ ಘಟಕವನ್ನು ಸ್ಥಾಪಿಸಲು ಬೆಂಗಳೂರು ಜಲಮಂಡಲಿ ಯೋಚಿಸಿದ್ದು ಇದಕ್ಕೆ ಸಂಬಂಧಪಟ್ಟ ಕಾಮಗಾರಿಗಳು ಈಗಾಗಲೇ ಪ್ರಾರಂಭವಾಗಿವೆ. ಇದಕ್ಕಲ್ಲದೆ ಈಗ ತೆರೆದ ಚರಂಡಿಯಲ್ಲಿ ಹರಿಯುತ್ತಿರುವ ಕೊಳಚೆ ನೀರನ್ನು ತಪ್ಪಿಸಲು ಹಲವಾರು ಮುಖ್ಯ ಹಾಗೂ ಉಪ ಮುಖ್ಯ ಕೊಳವೆಗಳನ್ನು ಹಾಕುವ ಕೆಲಸವನ್ನೂ ಸಹ ಜಲಮಂಡಲಿಯು ಕೈಗೊಂಡಿದೆ.

ಪುರಸಭಾ ನೌಕರರಿಗೆ ಮುಖ್ಯಾಧಿಕಾರಿಗಳ ಹುದ್ದೆಗೆ ಬಡ್ತಿ.

೧೬೬೪. ಶ್ರೀ ಬಿ. ಆರ್. ನಿಲಕಂಟಪ್ಪ (ತರೀಕೆರೆ).—ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟುಉತ್ತರಿಸುವರೇ ?

ಅ) ಕರ್ನಾಟಕ ಪೌರಾಡಳಿತ ಸೇವಾ ನಿಯಮ ೧೯೭೦ರ ಜೂನೇ ಕಾಲಂಮಿನ ಪ್ರಕಾರ ಪುರಸಭಾ ನೌಕರರಿಗೆ ಶೇಕಡಾ ೩೫ರಷ್ಟು ಮುಖ್ಯಾಧಿಕಾರಿಗಳ ಹುದ್ದೆಗೆ ಬಡ್ತಿ ನೀಡಲು ಅವಕಾಶವ್ಯವಯ ಎಷ್ಟು ಪುರಸಭಾ ನೌಕರರಿಗೆ ಮುಖ್ಯಾಧಿಕಾರಿಗಳ ಹುದ್ದೆಗೆ ಬಡ್ತಿ ನೀಡಿ ಕೆ. ಎಂ. ಎ. ಎಸ್. ದರ್ಜೆಯಲ್ಲಿ ಸೇರಿಸಲಾಗಿದೆ.

ಆ) ರಾಜ್ಯದಲ್ಲಿ ಎಷ್ಟು ಜನ ಪುರಸಭಾ ನೌಕರರು ಮುಖ್ಯಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರನ್ನು ಪೌರಾಡಳಿತ ಸೇವಾ ದರ್ಜೆಗೆ ಸೇರಿಸಲಾಗಿದೆಯೇ ಸೇರಿಸದಿದ್ದಲ್ಲಿ ಕಾರಣವೇನು ?

ಇ) ಇವರನ್ನು ಮಾತೃ ಇಲಾಖೆಗೆ ಮರುವಿಲೀಕರಣ ಗೊಳಿಸಲು ಕಾರಣವೇನು ? ಇತರೆ ಇಲಾಖೆಯವರು ಮುಖ್ಯಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿರುವವರನ್ನು ಅವರ ಮಾತೃ ಇಲಾಖೆಗೆ ವರುವಿಲೀಕರಣ ಮಾಡಲು ಸರ್ಕಾರದ ಆದೇಶವಿದ್ದರೂ ಸಹ ಅವರನ್ನು ಅವರವರ ಮಾತೃ ಇಲಾಖೆಗೆ ಏಕೆ ಮರುವಿಲೀಕರಿಸಿಲ್ಲ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಮತ್ತು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—

ಅ) ಸದರೀ ನಿಯಮಗಳಿಗನುಸರಿಸಿ ಮುಖ್ಯಾಧಿಕಾರಿಗಳೆಂದು ಬಡತಿ ಕೊಟ್ಟಿಲ್ಲ.

ಆ) ಶೇಕಡ ಸದರಿ ನಿಯಮಾವಳಿಗಳಲ್ಲಿ ನ್ಯೂನತೆಗಳಿರುವುದರಿಂದ ಅವರನ್ನು ಪೌರಾಡಳಿತ ಸೇವೆಗೆ ಸೇರಿಸಲಾಗಿಲ್ಲ.

ಇ) ಕರ್ನಾಟಕ ಪೌರಾಡಳಿತ ಸೇವಾ ವೃಂದಕ್ಕೆ ಸೇರಿದ ಎಲ್ಲಾ ಮುಖ್ಯಾಧಿಕಾರಿಗಳನ್ನು ಅವರವರ ಮೂಲ ಇಲಾಖೆಗೆ ಮರಳಿಸಲು ಸರ್ಕಾರ ಆದೇಶಿಸಿದೆ.

ಜನತಾ ಮತ್ತು ಹುಡ್ಕೋ ಮನೆಗಳ ದುರಸ್ತಿ ವಿಷಯವಾಗಿ

೧೬೬೫. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೮೫-೮೬ನೇ ಸಾಲಿನಲ್ಲಿ ಜನತಾ ಮನೆ ಹುಡ್ಕೋ ಮನೆಗಳ ದುರಸ್ತಿಗಾಗಿ ಸರ್ಕಾರದವರಿಂದ ಎಷ್ಟು ಹಣ ಮಂಜೂರು ಮಾಡಲಾಗಿದೆ.ಹಾಗೂ ಎಷ್ಟು ಜನರಿಗೆ ಮನೆ ದುರಸ್ತಿ ಪಡಿಸಲು ಮಂಜೂರಾತಿ ನೀಡಲಾಗಿದೆ.